ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು) :

ಅ) 1980. ಈ ಆಸ್ಪತ್ರೆಗೆ ನಿಯಮದ ಪ್ರಕಾರ ಅಂದರೆ ಹೊಸ ಕಟ್ಟಡವು ಪೂರ್ಣಗೊಂಡ ನಂತರ 30 ಹಾಸಿಗೆಗಳ ಆಸ್ಪತ್ರೆಗೆ ನಾರ್ಮ್ಸ್ ಪ್ರಕಾರ ಬೇಕಾಗುವ ಹೆಚ್ಚುವರಿ ಸಿಬ್ಬಂದಿ, ಆಹಾರ, ರೂ. 1.00 ಲಕ್ಷದಷ್ಟು ಔಷಧ, ಬೆಡ್ಡಿಂಗ್ ಲಿನನ್ ಹಾಗೂ ಉಪಕರಣಗಳನ್ನು ಒದಗಿಸಬೇಕಾಗುವುದು.

ಆ) ನಿಯಮದಂತೆ ಇರಬೇಕಾದ ಹಾಸಿಗೆಗಳ ಸಂಖ್ಯೆ : 30. ಈಗ ಹಾಲಿ ಇರುವ ಹಾಸಿಗೆಗಳ ಸಂಖ್ಯೆ 6.

ಇ) ಇಲ್ಲ.

ಈ) 30 ಹಾಸಿಗೆಯ ಕಟ್ಟಡವು ಪೂರ್ಣಗೊಂಡಿದ್ದು, ನಿಯಮಾನುಸಾರ ಹೆಚ್ಚಿನ ಸಿಬ್ಬಂದಿಯನ್ನು ಮಂಜೂರು ಮಾಡುವ ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನಲ್ಲಿರುವ ಆಸ್ಪತ್ರೆಯನ್ನು ಮೇಲೆ ದರ್ಜೆಗೆ ಏರಿಸಿ ಸುಮಾರು 11 ವರ್ಷಗಳಾಗಿದ್ದರೂ ಅಲ್ಲಿಗೆ ಸಿಬ್ಬಂದಿ ವರ್ಗದವರನ್ನು ನೇಮಕಾತಿ ಮಾಡಿಲ್ಲ, ಈ ಆಸ್ಪತ್ರೆಯ ಕಾರ್ಯಕ್ಷೇತ್ರದಲ್ಲಿ ಮಹಿಳಾ ಶುಶ್ರೂಷಕಿ ಮತ್ತ ಪುರುಷ ಶುಶ್ರೂಷಕ ಹುದ್ದೆಯನ್ನು ಸರ್ಕಾರದವರು ಮಂಜೂರು ಮಾಡಿರುವುದಿಲ್ಲ ಮತ್ತು ನೇಮಕಾತಿ ಮಾಡಿರುವುದಿಲ್ಲ, ಇತ್ತೀಚೆಗೆ ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾದರೂ ಒಂದು ಶುಶ್ರೂಷಕಿಯ ಹುದ್ದೆಯನ್ನು ಕೊಡುವಂಥ ಕ್ರಮ ಇದೆಯೇ? ಈ ಒಂದು ಹುದ್ದೆಯನ್ನು ಕೊಟ್ಟು ಭರ್ತಿ ಮಾಡಬೇಕು ಮತ್ತು ಈ ಮೇಲ್‌ದರ್ಜೆಗೆ ಏರಿಸಲ್ಪಟ್ಟಿರುವ ಆಸ್ಪತ್ರೆಯಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ಇನ್ನು ಎಷ್ಟು ಸಮಯಲ್ಲಿ ಭರ್ತಿ ಮಾಡಲಾಗುತ್ತದೆಂದು ಕೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೇ ಈ ಆಸ್ಪತ್ರೆಯನ್ನು ಮಂಜೂರು ಮಾಡಿರುವುದು ನಿಜ. ಈಗ ಕಟ್ಟಡವೂ ಮುಗಿದಿದೆ. ಈ ಕೂಡಲೆ ಅದಕ್ಕೆ ತಕ್ಕಂಥ ಎಲ್ಲ ಸಿಬ್ಬಂದಿಯನ್ನು ಮತ್ತು ಬಾಕಿ ಎಲ್ಲ ವರ್ಗದ ಸಿಬ್ಬಂದಿಗಳನ್ನು ನಾವು ನೇಮಕ ಮಾಡಿಕೊಡುತ್ತೇವೆ.

ಗ್ರಾಮಾಂತರ ಪ್ರದೇಶದಲ್ಲಿ ಔಷಧಿಗಳು ದೊರೆಯದಿರುವುದು

311 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಿಗೆ ಔಷಧ ಸರಬರಾಜು ಮಾಡುವ ಸಲುವಾಗಿ ಕೊಟ್ಟಿರುವ ಹಣದ ಪ್ರಮಾಣವೆಷ್ಟು (ಬೀದರ್ ಜಿಲ್ಲೆಯಲ್ಲಿ ಬರುವ ಗ್ರಾಮಾಂತರ ಆಸ್ಪತ್ರೆಗಳಿಗೆ ಕೊಟ್ಟಿರುವ ಹಣದ ವಿವರಗಳನ್ನು ನೀಡುವುದು)?

ಆ) ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜನ್ನು ಸೂಕ್ತವಾಗಿ ಪೂರೈಸುತ್ತಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಗಳಲ್ಲಿ ಔಷಧಿಗಳು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀಮತಿ ಕೆ. ಎಸ್.ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರೂ 572.66 ಲಕ್ಷಗಳು

ಬೀದರ್ ಜಿಲ್ಲೆಗೆ ರೂ 20.25 ಲಕ್ಷಗಳು

ಆ) ಕೆಲವು ಸಲ ದೊರಕದಿರುವುದು ಗಮನಕ್ಕೆ ಬಂದಿದೆ.

ಇ) ಔಷಧಿಗಳ ಸರಬರಾಜು ಮಾಡಲು ಈ ವರ್ಷದ ಹಣವನ್ನು ಪೂರ್ತಿ ಉಪಯೋಗಿಸಲು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಸೂಕ್ತ ಆದೇಶವನ್ನು ಹೊರಡಿಸಲಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷಣಿಯರೇ, ನಾನು ಔಷಧಿಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸಲು ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ 572.66 ಲಕ್ಷ ರೂಪಾಯಿಗಳೆಂದು ಹೇಳಿದ್ದಾರೆ. ಆಮೇಲೆ ಬೀದರ್ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ ಎಂದು ಕೇಳಿರುವುದಕ್ಕೆ 20.25 ಲಕ್ಷ ರೂಪಾಯಿಗಳೆಂದು ಹೇಳಿದ್ದಾರೆ. ಆದರೆ ಅಲ್ಲಿನ ಆಸ್ಪತ್ರೆಗಳಲ್ಲಿ ಔಷಧಿಗಳೇ ಇರುವುದಿಲ್ಲ. ಇದಕ್ಕೆ ಏನು ಕಾರಣ? ಅದಕ್ಕೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ಔಷಧಿಗಳು ಹಳ್ಳಿಗಳಿಗೆ ಹೋಗದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಕೆಲವು ಸಲ ದೊರಕದಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅಂದರೆ ಏನೂ ಸಿಕ್ಕಿಲ್ಲ ಎಂದು ಅರ್ಥವಾಗುತ್ತದೆ. ಎರಡನೆ ಪ್ರಶ್ನೆಗೆ ಉತ್ತರವಾಗಿ ಕೆಲವು ಸಲ ದೊರಕದಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿರುವುದು ನನಗೆ ಅರ್ಥವಾಗಲಿಲ್ಲ. ಅಂದರೆ ದೊರಕದಿರುವುದು ನಿಮ್ಮ ಗಮನಕ್ಕೆ ಬಂದಿದೆ ಎಂದರೆ ಯಾವಾಗಲೂ ಸಿಕ್ಕಿಲ್ಲವೆಂದು ಅದರ ಅರ್ಥ. ನಾವು ಎಲ್ಲ ಆಸ್ಪತ್ರೆಗಳಲ್ಲೂ ನೋಡುತ್ತೇವೆ, ಯಾವ ಔಷಧಿಗಳೂ ಇರುವುದಿಲ್ಲ. ನಾವು ಎಂ.ಎಲ್.ಎ.ಗಳು ಹೋಗಿ ಫಜೀತಿ ಪಟ್ಟಿದ್ದೇವೆ. ಯಾವಾಗ ಕೇಳಿದರೂ ಗುಳಿಗೆಗಳೂ ಇರುವುದಿಲ್ಲ, ಇಂಜಕ್ಷನ್ ಇರುವುದಿಲ್ಲ, ಹಳ್ಳಿಗರು ಹೋದರೆ ಏನು ಸಿಗುತ್ತದೆಂದರೆ ಬಿ.ಹೆಚ್.ಇ. ಪೌಡರ್ ಬಾವಿಗಳಿಗೆ ಹಾಕುತ್ತಾರಲ್ಲ ಅದು ಕೊನೆಗೆ ಕೊಡುತ್ತಾರೆ. ದವಾಖಾನೆಯಲ್ಲಿ ಇಷ್ಟು ತೊಂದರೆಯಾಗಿದೆ ಹಾಗಾದರೆ ಈ 572.66 ಲಕ್ಷ ರೂಪಾಯಿ ಹಣ ಎಲ್ಲಿ ಹೋಯಿತು. ಸಂಬಂಧಪಟ್ಟ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಏನಾದರೂ ಒಂದು ವಿಶೇಷ ಕಾರ್ಯಕ್ರಮ ತೆಗೆದುಕೊಂಡಿರುತ್ತಾರೆಯೇ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತೇನೆ. ಔಷಧಿಗಳು ಬೀದರ್‌ನ ಅಂಗಡಿಗಳಲ್ಲಿ ಸಿಗುತ್ತವೆ. ಅಂಗಡಿಗಳಿಗೆ ಹೋಗುತ್ತವೆ ಬರುತ್ತದೆ ಮತ್ತು ಎಲ್ಲಿ ಎಲ್.ಹೆಚ್.ನಲ್ಲಿ ಅದೇ ರೀತಿಯಾಗಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಕೆಲವು ಸಲ ಔಷಧಿಗಳು ದೊರಕದೆ ಇರುವುದು ನಮ್ಮ ಗಮನಕ್ಕೆ ಬಂದಿದೆ. ಅಂದರೆ ಯಾವಾಗಲೂ ದೊರಕಿಲ್ಲವೆಂದು ಅಲ್ಲ. ಒಂದೊಂದು ಸಾರಿ ಔಷಧಿ ಹೋಗಿಲ್ಲದೆ ಇರುವುದು ನಮ್ಮ ಗಮನಕ್ಕೆ ಬಂದಿದೆ. ಹೋಗಿಲ್ಲವೆಂದು ನಮ್ಮ ಗಮನಕ್ಕೆ ಬಂದಮೇಲೆ ಔಷಧಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ಆಮೇಲೆ ಲೆಜಿಸ್ಲೇಟರ್ಸ್ ವಿಚಾರ ಹೇಳಿದಿರಿ, ಅದನ್ನು ಇಲ್ಲಿ ಪ್ರಸ್ತಾಪ ಮಾಡಬಾರದಾಗಿತ್ತು. 300 ಜನ ಸದಸ್ಯರು 3 ಲಕ್ಷ ರೂಪಾಯಿ ಔಷಧಿ ತಿನ್ನುತ್ತಿದ್ದಾರೆ. ಅದಕ್ಕಿಂತ ಜಾಸ್ತಿ ಏನು ಔಷಧಿಯನ್ನು ಸರಬರಾಜು ಮಾಡೋಣ? ಬಾಕಿ ಪಿ.ಹೆಚ್.ಸಿ.ಗಳಿಗೆ 30 ಸಾವಿರ ರೂಪಾಯಿಗಳ ಔಷಧಿಯನ್ನು ಕೊಟ್ಟರೆ ಇಲ್ಲಿ 3 ಲಕ್ಷ ರೂಪಾಯಿಗಳ ಔಷಧಿಯನ್ನು ಕೊಡುತ್ತಿದ್ದೇವೆ. ಹೀಗಿರುವಾಗ ಆ ವಿಚಾರ ಇಲ್ಲಿ ಬರಬಾರದಾಗಿತ್ತು. ಅದರ ಬಗ್ಗೆ ಇಲ್ಲಿ ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ನಾವು ಕೊಟ್ಟ ಔಷಧಿ ಎಲ್ಲ ಎಲ್ಲಿ ಹೋಯಿತು, ಏನಾಯಿತೆಂಬುದನ್ನು ಪತ್ತೆ ಮಾಡುವುದಕ್ಕೆ ನಾನು ರಾಜ್ಯವನ್ನೆಲ್ಲ ಸುತ್ತಾಡಿ ಬಂದಿದ್ದೇನೆ. ಕೆಲವು ಸಾರಿ ಔಷಧಿ ಹೋಗದೆ ಇರುವುದು ನನ್ನ ಗಮನಕ್ಕೆ ಬಂದಿದೆ. ಅದನ್ನೆಲ್ಲ ಸರಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮುಂದಕ್ಕೆ ಔಷಧಿಗಳು ಸರಿಯಾಗಿ ತಲುಪುತ್ತವೆಂದು ಭಾವಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : 3ಲಕ್ಷ ರೂಪಾಯಿ ಔಷಧಿ ಕೊಟ್ಟಿದ್ದೇವೆಂದು ಹೇಳಿದಿರಿ. ಆದರೆ ನಾವು ಹೋದಾಗ ಔಷಧಿ ಇರಲಿಲ್ಲ, ನಮಗೆ ಔಷಧಿ ಸಿಗಲಿಲ್ಲ. ನಾವು ತಪ್ಪು ಮಾಡಿದರೆ ಶಿಕ್ಷೆ ಆಗಬೇಕು. ಆ ವಿಚಾರ ಏಕೆ ಇಲ್ಲಿ ಬರಬಾರದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನೀವು ತಪ್ಪು ಮಾಡಿದ್ದೀರಿ ಎಂದು ಹೇಳಿದೆನೆ? ನೀವು ಏತಕ್ಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಬೀದರ್ ಜಿಲ್ಲೆಯಲ್ಲಿ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳು ಇವೆ. ಅಲ್ಲಿ ವೈದ್ಯರಿಲ್ಲದೆ ಜನರು ಬಹಳ ತೊಂದರೆಯಲ್ಲಿದ್ದಾರೆ. ಆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ನಮ್ಮ ಬಸವಕಲ್ಯಾಣದಲ್ಲಿರತಕ್ಕ ಆರೋಗ್ಯ ಕೇಂದ್ರಗಳಲ್ಲಿ, ಆರೋಗ್ಯ ಘಟಕಗಳಲ್ಲಿ ಕಳೆದ ೫ ವರ್ಷಗಳಿಂದ ವೈದ್ಯರಿಲ್ಲದೆ ತೊಂದರೆಯಾಗುತ್ತಿದೆ. ಆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಬಹಳ ಕಾಲದಿಂದ ವೈದ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನು ರೆಕ್ರೂಟ್ ಮಾಡದೆ ತೊಂದರೆಯಾಗಿತ್ತು. ಈಗ 538 ಮಂದಿ ವೈದ್ಯರನ್ನು ರೆಕ್ರೂಟ್ ಮಾಡಿದ್ದೇವೆ. ಅವರು ವೈದ್ಯಕೀಯ ತಾಪಸಣೆಗೆ ಹೋಗಿದ್ದಾರೆ. 20 ದಿನಗಳಲ್ಲಿ ಅವರ ಲಿಸ್ಟ್ ಬರುತ್ತದೆ. ಬಂದ ತಕ್ಷಣ ಆದಷ್ಟು ಮಟ್ಟಿಗೆ ಎಲ್ಲಾ ಆಸ್ಪತ್ರೆಗಳಿಗೆ ವೈದ್ಯರನ್ನು ಒದಗಿಸುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಮ್ಮ ತಾಲ್ಲೂಕಿನಲ್ಲಿ 13 ಮಂದಿ ವೈದ್ಯರ ಪೈಕಿ 3 ಜನ ಮಾತ್ರ ಇದ್ದಾರೆ. ಇನ್ನೂ ಹತ್ತು ಹುದ್ದೆಗಳು ಖಾಲಿ ಇದೆ. ಅವನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡುತ್ತೀರಿ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನಾನು ಆಗಲೇ ಅದಕ್ಕೆ ಉತ್ತರ ಹೇಳಿದ್ದೇನೆ.

ಉಪಾಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್ : 1185 ನೇ ಸಂಖ್ಯೆಯ ಪ್ರಶ್ನೆ ಇದೆ.

ಉಪಾಧ್ಯಕ್ಷರು : ಒಂದು ಗಂಟೆ ಆದಮೇಲೆ ಮತ್ತೆ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ತಮ್ಮ ಹೆಸರು ಕರೆದಾಗ ತಾವು ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಪ್ರಮುಖವಾದುದು.

ಶ್ರೀ ಕೆ.ಹೆಚ್. ಪಾಟೀಲ್ : ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಹೀಗೆ ಮಾಡಿದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ : ಜಯದೇವ ಹೃದ್ರೋಗ ಆಸ್ಪತ್ರೆ ಇಡೀ ರಾಜ್ಯದಲ್ಲಿ ಒಂದೇ ಇರುವುದು. ಇದು ಬಹಳ ಮುಖ್ಯವಾದುದೆಂದು ಹೇಳಿದರು . ತಾವು ಅಪ್ಪಣೆ ಕೊಡದೆ ಇದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ.

ಉಪಾಧ್ಯಕ್ಷಿರು : ಅದನ್ನು ಹೆಲ್ಡ್ ಓವರ್ ಮಾಡುತ್ತೇನೆ?

ಶ್ರೀ ವಾಟಾಳ್ ನಾಗರಾಜ್ : ಆಗಬಹುದು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕುಟುಂಬ ಕಲ್ಯಾಣ ಕಾರ್ಯಕ್ರಮ

510 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಾಹಳ್ಳಿ) : ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?